**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.</u>**

**<u>ಸಿಸಿ ನಂಃ55/2017</u>**

| | | | |
|---|---|---|---|
| ಹೆಸರು | ಃ | ಶ್ರೀಮತಿ ಜಯಲಕ್ಷ್ಮಮ್ಮ | ಸಿ.ಡಬ್ಲ್ಯೂ 1 |
| ತಂದೆಯ ಹೆಸರು | ಃ | ಸಿದ್ದರಾಜು | ಪಿ.ಡಬ್ಲ್ಯೂ 1 |
| ವಯಸ್ಸು | ಃ | 65 ವರ್ಷ | |
| ಉದ್ಯೋಗ | ಃ | ಗೃಹಿಣಿ | |
| ವಾಸ ಸ್ಥಳ | ಃ | ಬ್ಯಾಡರಹಳ್ಳಿ ಗ್ರಾಮ | |

**<u>ಸಾಕ್ಷಿಗೆ ದಿನಾಂಕಃ 17.01.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .</u>**

1. ಚಾ.ಸಾ.2 ನನ್ನ ಮಗಳು ಆರೋಪಿ ನನ್ನ ಅಳಿಯ. ಚಾ.ಸಾ.3 ರಿಂದ 6 ರವರು ನನಗೆ ಗೊತ್ತು. ಆರೋಪಿ ಚಾ.ಸಾ.2 ರವರಿಗೆ ಮದ್ಯಪಾನ ಮಾಡಿ ಬಂದು ಹೊಡೆಯುತ್ತಿದ್ದರು, ಆಕೆಯೊಂದಿಗೆ ಅವಾಚ್ಯ ಶಬ್ದಗಳಿಂದ ಬೈದು, ಜಗಳವಾಡುತ್ತಿದ್ದರು. ಆ ಕಾರಣಕ್ಕೆ ಆಕೆ ಮಕ್ಕಳೊಂದಿಗೆ ನಮ್ಮ ಮನೆಗೆ ಬಂದಿದ್ದರು. ಆರೋಪಿ ಮತ್ತು ಚಾ.ಸಾ.2 ರವರಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಕ್ಕಳಿದ್ದಾರೆ.

2. ಆರೋಪಿ ಸುಮಾರು 6 - 7 ವರ್ಷಗಳ ಹಿಂದೆ ಚನ್ನಪಟ್ಟಣದಿಂದ ನಮ್ಮ ಮನೆಗೆ ಬಂದು, ಸಂಜೆ 4.00 ಗಂಟೆಯ ಸಮಯದಲ್ಲಿ ಚಾ.ಸಾ.2 ರವರೊಂದಿಗೆ ಮತ್ತು ನಮ್ಮೊಂದಿಗೆ ಜಗಳವಾಡಿ ಮಕ್ಕಳನ್ನು ತನ್ನೊಂದಿಗೆ ಕಳುಹಿಸುವಂತೆ ಗಲಾಟೆ ಮಾಡಿದರು. ಆರೋಪಿ ನನ್ನ ಮಗಳನ್ನು ಹೊಡೆಯಲು ಬಂದಾಗ ನಾನು ನನ್ನ ಮಗಳನ್ನು ಪಕ್ಕಕ್ಕೆ ಎಳೆದುಕೊಂಡಿರುತ್ತೇನೆ. ಆ ಸಮಯದಲ್ಲಿ ಅಲ್ಲಿಯೇ ಇದ್ದ ಕಲ್ಲನ್ನು ಆರೋಪಿ ಎತ್ತಿಕೊಂಡು ನನ್ನ ಬಲ ಕಾಲಿನ ಪಾದದ ಮೇಲೆ ಎತ್ತಿ ಹಾಕಿದರು. ಆಗ ನನ್ನ ಕಾಲು ಮುರಿದು ರಕ್ತ ಬರುತ್ತಿತ್ತು. ನನಗೆ ಪ್ರಜ್ಞೆ ತಪ್ಪಿಹೋಗಿದ್ದು, ಅಕ್ಕ ಪಕ್ಕ ಜನರು ಬಂದು ನನ್ನನ್ನು ಉಪಚರಿಸಿರುತ್ತಾರೆ. ಚಾ.ಸಾ.4 ರವರು ಅಂಬ್ಯೂಲೆನ್ಸ

ಮೂಲಕ ನನ್ನನ್ನು ಮಳವಳ್ಳಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಆಸ್ಪತ್ರೆಯಲ್ಲಿ ಪೊಲೀಸರು ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ. ಹೇಳಿಕೆ ದೂರಿನಲ್ಲಿರುವ ಸಹಿ ನನ್ನದೇ. ಹೇಳಿಕೆ ದೂರನ್ನು ನಿಪಿ.1 ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ನಾನು ಮಂಡ್ಯ ಜಿಲ್ಲಾ ಆಸ್ಪತ್ರೆಯಲ್ಲಿ ಒಂದು ತಿಂಗಳ ಕಾಲ ಚಿಕಿತ್ಸೆ ಪಡೆದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇನೆ.

3. ಆರೋಪಿ ನನ್ನ ಕಾಲಿನ ಮೇಲೆ ಕಲ್ಲು ಎತ್ತಿಹಾಕುವ ಮೊದಲು ನನ್ನ ಕಾಲು ಚೆನ್ನಾಗಿತ್ತು. ಆ ದಿನ ನನಗೆ ಹಲ್ಲೆ ಮಾಡಿದ ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಈಗ ನನಗೆ ಕೆಳಗೆ ಕೂರಲು ಮತ್ತು ಸರಿಯಾಗಿ ಓಡಾಡಲು ಆಗುವುದಿಲ್ಲ.

ಈ ಹಂತದಲ್ಲಿ ಸ.ಸ.ಅಭಿಯೋಜಕರ ಕೋರಿಕೆಯ ಮೇರೆಗೆ ಮುಂದುವರೆ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.